# ಏನು ಮಾಡಲೊ ಮಗನೆ ಯಾಕೆ ಬೆಳಗಾಯಿತೊ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 81
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 131
3. **Note:** Lyrics given without highlights are as per Ref. 1. The wordings given in yellow highlights are as per Ref. 2. There are few minor differences in these versions.
4. **Note:** Singer has followed lyrics as in Ref. 2.

ರಾಗ: ಸಹಾನ ತಾಳ: ಅಟ್ಟ

ಏನು ಮಾಡಲೊ ಮಗನೆ ಯಾಕೆ ಬೆಳಗಾಯಿತೊ
ಏನು ಮಾಡಲೊ ಕೃಷ್ಣಯ್ಯ || ಪ ||

ಏನು ಮಾಡಲಿ ಇನ್ನು ಮಾನಿನಿಯರು ಎನ್ನ
ಮಾನವ ಕಳೆಯುವರೊ ರಂಗಯ್ಯ || ಅಪ ||

ಹಾಲು ಮೊಸರು ಬೆಣ್ಣೆ ಕದ್ದನೆಂಬುವರೊ
ಮೇಲಿನ ಕೆನೆಗಳ ಮೆದ್ದನೆಂಬುವರೊ
ಬಾಲಕರೆಲ್ಲರ ಬಡಿದನೆಂಬರೊ ಎಂಥ
ಕಾಳ ಹೆಂಗಸು ಇವನ ಹಡೆದಳೆಂಬುವರೊ || ೧ ||

ಕಟ್ಟಿದ್ದ ಕರುಗಳ ಬಿಟ್ಟನೆಂತೆಂಬರೊ
ಮೆಟ್ಟಿ ಸರ್ಪನ ಮೇಲೆ ಕುಣಿದನೆಂಬುವರೊ
ಪುಟ್ಟ ಬಾಲೆಯರ ಮೋಹಿಸಿದನೆಂಬರೊ ಎಂಥ
ದುಷ್ಟ ಹೆಂಗಸು ಇವನ ಹಡೆದಳೆಂಬುವರೊ || ೨ ||

ಗಂಗಾಜನಕ ನಿನ್ನ ಜಾರನೆಂತೆಂಬರೊ
ಶೃಂಗಾರ ಮುಖ ನಿನ್ನ ಬರಿದೆ ದೂರುವರೊ
ಮಂಗಳ ಮಹಿಮ ಶ್ರೀ ಪುರಂದರ ವಿಠ್ಠಲ
ಹಿಂಗದೆ ಎಮ್ಮನು ಸಲಹೆಂತೆಂಬರೊ || ೩ ||

ರಾಗ: ಬಿಲಹರಿ ತಾಳ: ಅಟ

ಏನ ಮಾಡಲಿ ಮಗನೆ ಏಕೆ ಬೆಳಗಾಯಿತು
ಮಾನಿನಿಯರು ಬಂದು ಮಾನ ಕಳೆಯುವರು

ಹಾಲು ಮೊಸರು ಬೆಣ್ಣೆ ಕದ್ದನೆಂತೆಂಬುವರು
ಮೇಲಿಟ್ಟ ಕೆನೆಯನು ಮೆದ್ದನೆಂಬುವರು
ಬಾಲರನೆಲ್ಲರ ಬಡಿದನೆಂಬರು ಎಂಥ
ಕಾಳು ಹೆಂಗಸು ಇವನ ಹಡೆದಳೆಂಬುವರೊ

ಕಟ್ಟಿದ್ದ ಕರುಗಳ ಬಿಟ್ಟನೆಂತೆಂಬರೊ
ಮೆಟ್ಟಿ ಸರ್ಪನ ಮೇಲೆ ತುಳಿದನೆಂಬುವರೊ
ಪುಟ್ಟ ಬಾಲೆಯರ ಮೋಹಿಸಿದನೆಂಬರೊ ಎಂಥ
ಕೆಟ್ಟ ಹೆಂಗಸು ಇವನ ಹಡೆದಳೆಂಬುವರೊ

ಗಂಗಾಜನಕ ನಿನ್ನ ಜಾರನೆಂತೆಂಬರೊ
ಶೃಂಗಾರ ಮುಖ ನಿನ್ನ ಬರಿದೆ ದೂರುವರೊ
ಮಂಗಳ ಮಹಿಮ ಶ್ರೀ ಪುರಂದರ ವಿಠ್ಠಲ
ಹಿಂಗದೆ ಎಮ್ಮನು ಸಲಹೆಂತೆಂಬುವರೊ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪಿಯರ ದೂರನ್ನು ಕೇಳಿ ಬೇಸತ್ತ ಯಶೋದೆ ಶ್ರೀ ಕೃಷ್ಣನಿಗೆ ಆಡುವ ಮಾತುಗಳಿವು.

**ಕಾಳ ಹೆಂಗಸು** – ಕೆಟ್ಟ ಹೆಂಗಸು.

**ಮೆಟ್ಟಿ ಸರ್ಪನ ಮೇಲೆ** – ಯಮುನಾನದಿಯ ಕಾಳಿಂದಿ ಮಡುವಿನಲ್ಲಿ ಕಾಳಿಯ ನಾಗನನ್ನು ದಮನ ಮಾಡಿದ ಸಂದರ್ಭ.

**ಗಂಗಾಜನಕ** – ತ್ರಿವಿಕ್ರಮಾವತಾರದಲ್ಲಿ ಬ್ರಹ್ಮಾಂಡ ಕಟಾಹಕ್ಕೆ ಪಾದ ಸೋಕಿ ಗಂಗೆ ಹೊರಬಂದ ಪ್ರಸಂಗ.

**ಶೃಂಗಾರ ಮುಖ** – ಚೆಲುವಾದ ಮುಖವುಳ್ಳ ನಿನ್ನನ್ನು.

**ಬರಿದೆ** – ಕಾರಣವಿಲ್ಲದೆ.

**Classification:** Keerthane
**Ankita:** Sri Purandara Vittala
**Location:** NA
**Category:** Krishna Leele
**Sub-Category:** Krishna, gopi, yashode, beligge, udaya, hengasu, ranga, mosaru, benne, kalla, govu, gange, mangala,
**Pravachana:** NA
**Explanation:** NA